**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ/6/ಎಆರ್‌ಎ/2013

ಕರ್ನಾಟಕ ಸರ್ಕಾರದ ಸಚಿವಾಲಯ
ಬಹು ಮಹಡಿ ಕಟ್ಟಡ
ಬೆಂಗಳೂರು, ದಿ. 09.10.2013

ಇಂದ,

**ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬೆಂಗಳೂರು

ಇವರಿಗೆ,

1. **ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು**
   ______________ **ಜಿಲ್ಲಾ ಪಂಚಾಯತ್**

2. **ಕಾರ್ಯನಿರ್ವಾಹಕ ಅಧಿಕಾರಿಗಳು**
   ______________ **ತಾಲ್ಲೂಕ್ ಪಂಚಾಯತ್**

ಮಾನ್ಯರೆ,

**ವಿಷಯ : ಗ್ರಾಮ ಪಂಚಾಯತಿಗಳ 2009-10 ನೇ ಸಾಲಿನ ವಾರ್ಷಿಕ ಕ್ರೋಢೀಕೃತ ಲೆಕ್ಕಪರಿಶೋಧನಾ ವರದಿಗೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ**

**ಉಲ್ಲೇಖ: ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ ಇವರ ಪತ್ರ ಸಂಖ್ಯೆ : ರಾಲೆಪ 18 ಗ್ರಾಸ್ಥಸಂ 2011/146/3135 ದಿನಾಂಕ: 03-07-2013 & 18-07-2013**

*****

ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ಕಲಂ 246(12) ರಂತೆ ರಾಜ್ಯದ ಗ್ರಾಮ ಪಂಚಾಯತಿಗಳ ಕ್ರೋಢೀಕೃತ ಲೆಕ್ಕಪರಿಶೋಧನಾ ವರದಿಯನ್ನು ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ ಇವರು ನೀಡಬೇಕಾಗುತ್ತದೆ ಹಾಗೂ ಅದನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಲು ಸರ್ಕಾರವು ಕ್ರಮವಹಿಸಬೇಕಾಗಿರುತ್ತದೆ. ಅದರಂತೆ ನಿಯಂತ್ರಕರು, ರಾಜ್ಯಲೆಕ್ಕಪತ್ರ ಇಲಾಖೆ ಇವರು 2009-10ನೇ ಸಾಲಿನ ಗ್ರಾಮ ಪಂಚಾಯತಿಗಳ ಕ್ರೋಢೀಕೃತ ಲೆಕ್ಕಪರಿಶೋಧನಾ ವರದಿಯನ್ನು ನೀಡಿರುತ್ತಾರೆ. ಅದನ್ನು ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸಲು ಈಗಾಗಲೇ ಕ್ರಮ ವಹಿಸಲಾಗಿರುತ್ತದೆ.

ಈ ಕ್ರೋಢೀಕೃತ ವರದಿಯಲ್ಲಿ ನಿಯಂತ್ರಕರು ಹಣ ದುರುಪಯೋಗ, ಶಾಸನಬದ್ಧ ಕಡಿತಗಳನ್ನು ಪಾವತಿ ಮಾಡದಿರುವುದು, ಸೆಲ್ಫ್ ಚೆಕ್‌ಗಳ ಮೂಲಕ ಹಣ ಡ್ರಾ ಮಾಡಿರುವುದು, ದಾಖಲಾತಿಗಳನ್ನು ಹಾಜರುಪಡಿಸದಿರುವುದು ಮುಂತಾದ ಗಂಭೀರ ಸ್ವರೂಪದ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುತ್ತಾರೆ. ಈ ವರದಿಯನ್ನು ಇದರೊಂದಿಗೆ ಲಗತ್ತಿಸಿದೆ. ಇದರಲ್ಲಿನ ಕಂಡಿಕೆಗಳಿಗೆ ಕೂಡಲೇ ಅನುಪಾಲನಾ ವರದಿ ಪಡೆದು ತೀರುವಳಿಗೊಳಿಸಲು ಹಾಗೂ ತಪ್ಪಿತಸ್ಥರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ತೆಗೆದುಕೊಳ್ಳಲು ಕ್ರಮವಹಿಸುವುದು. ಈ ಕುರಿತು ತೆಗೆದುಕೊಂಡ ಕ್ರಮದ ಬಗ್ಗೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದು. ಕ್ರೋಢೀಕೃತ ಲೆಕ್ಕಪರಿಶೋಧನಾ ವರದಿಯ ಪೂರ್ಣ ವಿವರಗಳು ಮತ್ತು ಅದಕ್ಕೆ ಸಂಬಂಧಪಟ್ಟ ಅನುಬಂಧಗಳು ಇಲಾಖಾ ಅಂತರ್ಜಾಲ ತಾಣ www.rdpr.kar.nic.in ನಲ್ಲಿ ಲಭ್ಯವಿರುತ್ತವೆ. ಈ ಬಗ್ಗೆ ವೈಯಕ್ತಿಕ ಗಮನಹರಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

ತಮ್ಮ ವಿಶ್ವಾಸಿ

22/10/13

(ಮುನೀಷ್ ಮೌದ್ಗಿಲ್)
ಸರ್ಕಾರದ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿಯನ್ನು :-

ಎಲ್ಲಾ ಮುಖ್ಯ ಲೆಕ್ಕಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.